# ಶ್ರೀ ಸುತ್ತೂರು ಮಠ

ಚಾಮುಂಡಿಬೆಟ್ಟದ ತಪ್ಪಲು, ಮೈಸೂರು

# ಬೆಳದಿಂಗಳ ಸಂಗೀತ 253

**6 ಏಪ್ರಿಲ್ 2023 * ಗುರುವಾರ * ಸಂಜೆ 6.00**

ದಿವ್ಯ ಸಾನ್ನಿಧ್ಯ

**ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು**

ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಸುತ್ತೂರು ಕ್ಷೇತ್ರ

## ಗಾಯನ



ಪಂ. ಎಂ. ವೆಂಕಟೇಶ್ ಕುಮಾರ್



ಪಂ. ವೀರಭದ್ರಯ್ಯ ಹಿರೇಮಠ
ಹಾರ್ಮೋನಿಯಂ



ಪಂ. ಕೇಶವ ಜೋಷಿ
ತಬಲ

**ಸರ್ವರಿಗೂ ಹಾರ್ದಿಕ ಸುಸ್ವಾಗತ**

**ಪಂ. ಎಂ. ವೆಂಕಟೇಶ್ ಕುಮಾರ್** 15ನೇ ವಯಸ್ಸಿನಲ್ಲಿ ಗದಗದ ವೀರಶೈವ ಪುಣ್ಯಾಶ್ರಮದ ಡಾ. ಪಂ. ಪುಟ್ಟರಾಜ ಗವಾಯಿಯವರ ಬಳಿ ಹಿಂದೂಸ್ತಾನಿ ಸಂಗೀತವನ್ನು ಕಲಿಯಲು ಪ್ರಾರಂಭಿಸಿದರು. ಗ್ವಾಲಿಯರ್ ಮತ್ತು ಕಿರಾನಾ ಘರಾಣೆಗಳ ನಡುವೆ ಸಮನ್ವಯ ಸಾಧಿಸಿದರು. ಉಸ್ತಾದ್ ಬಡೇ ಗುಲಾಂ ಅಲಿ ಖಾನ್‌ರವರಿಂದ ಪ್ರಭಾವಿತರಾಗಿದ್ದರು. ಕರ್ನಾಟಕ ಸಂಗೀತ ಪರಿಚಯದಿಂದ ಇವರ ಸ್ವರಪ್ರಸ್ತಾರ ಶೈಲಿ ವಿಶಿಷ್ಟವಾಗಿ ರೂಪುಗೊಂಡಿತು. ಇವರ ಎಲ್ಲ ಸಾಧನೆಗಳ ಹಿಂದೆ ಸೋದರಮಾವ, ಖ್ಯಾತ ಜನಪದ ಗಾಯಕ ಶ್ರೀ ವೀರಣ್ಣ ಬೆಳಗಲ್ಲುರವರ ಪ್ರೇರಣೆ ಇದೆ.

ಕಳೆದ 45 ವರ್ಷಗಳಿಂದ ಆಕಾಶವಾಣಿಯ "ಎ" ಕ್ಲಾಸ್ ಕಲಾವಿದರಾದ ಪಂ. ಎಂ.ವೆಂಕಟೇಶ್ ಕುಮಾರ್‌ರವರು ಬಹುತೇಕ ಎಲ್ಲ ರಾಷ್ಟ್ರೀಯ ಸಂಗೀತೋತ್ಸವಗಳಲ್ಲಿ ಪಾಲ್ಗೊಳ್ಳುವ ಖ್ಯಾತ ಸಂಗೀತಗಾರರು. ಶರಣರ ವಚನಗಳು ಮತ್ತು ದಾಸರ ಪದಗಳ ಗಾಯನದಲ್ಲಿ ವಿಶೇಷ ಪರಿಣತಿ ಹೊಂದಿದ್ದಾರೆ. ಭಕ್ತಿಗೀತೆಗಳು ಮತ್ತು ಅಭಿಜಾತ ಸಂಗೀತದ ಸಿ ಡಿ ಮತ್ತು ಆಲ್ಬಂಗಳನ್ನು ಹೊರತಂದಿದ್ದಾರೆ. ಸ್ವಲ್ಪ ಕಾಲ ಗದಗದ ವಿಜಯ ಮಹಾಂತೇಶ ಕಲಾ ವಿದ್ಯಾಲಯದಲ್ಲಿ ಶಿಕ್ಷಕರಾಗಿದ್ದು, ಅನಂತರ ಕರ್ನಾಟಕ ವಿಶ್ವವಿದ್ಯಾಲಯದ ಸಂಗೀತ ಕಾಲೇಜಿನಲ್ಲಿ 33 ವರ್ಷಗಳ ಕಾಲ ಅಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಅತ್ಯುತ್ತಮ ಶಾರೀರ, ಲಘು ಮನೋಧರ್ಮ, ವಿದ್ವತ್ತು-ವಿನಯಗಳ ಅಪೂರ್ವ ಸಂಗಮಗಳು ಇವರನ್ನು ನಾಡಿನ ಅತ್ಯುತ್ತಮ ಕಲಾವಿದರಲ್ಲೊಬ್ಬರಾಗಿ ರೂಪಿಸಿವೆ. ಸಂಗೀತ ಪ್ರಪಂಚದ ಮೇರುಪ್ರತಿಭೆಯಾಗಿರುವ ಇವರಿಗೆ ಕರ್ನಾಟಕ ಸಂಗೀತ ನೃತ್ಯ ಅಕ್ಯಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ವತ್ಸಲಾ ಭೀಮಸೇನ್ ಜೋಶಿ ಪ್ರಶಸ್ತಿ, ಕೃಷ್ಣಾ ಹಾನಗಲ್ ಪ್ರಶಸ್ತಿ, ಮಧ್ಯಪ್ರದೇಶ ಸರ್ಕಾರದ ಕಾಲಿದಾಸ್ ಸಮ್ಮಾನ್ ಪ್ರಶಸ್ತಿ, ಕೇಂದ್ರ ಸಂಗೀತ ನಾಟಕ ಅಕ್ಯಾಡೆಮಿ ಪ್ರಶಸ್ತಿ, ಪದ್ಮಶ್ರೀ ಪ್ರಶಸ್ತಿ ಮುಂತಾದ ಪ್ರತಿಷ್ಠಿತ ಪುರಸ್ಕಾರಗಳು ದೊರೆತಿವೆ. ಕರ್ನಾಟಕ ವಿಶ್ವವಿದ್ಯಾಲಯ ಮತ್ತು ಸತ್ಯಸಾಯಿ ಯೂನಿವರ್ಸಿಟಿ ಆಫ್ ಹ್ಯೂಮನ್ ಎಕ್ಸಲೆನ್ಸ್ ವಿದ್ಯಾಸಂಸ್ಥೆಗಳು ಗೌರವ ಡಾಕ್ಟರೇಟ್ ನೀಡಿ ಸನ್ಮಾನಿಸಿವೆ.

**ಪಂ. ವೀರಭದ್ರಯ್ಯ ಹಿರೇಮಠರವರು** ಗದಗಿನ ಶ್ರೀ ವೀರೇಶ್ವರ ಪುಣ್ಯಾಶ್ರಮದ ಡಾ. ಪಂ. ಪುಟ್ಟರಾಜ ಗವಾಯಿಗಳ ಶಿಷ್ಯರು. ಗುರುಕುಲ ಪದ್ಧತಿಯಲ್ಲಿ ಸಂಗೀತವನ್ನು ಅಭ್ಯಾಸ ಮಾಡಿದವರು. ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯ ಮಂಡಲ್‌ನಿಂದ 'ಸಂಗೀತ ವಿಶಾರದ' ಪದವಿ ಪಡೆದಿರುವವರು. ಅತ್ಯುತ್ತಮ ಹಾರ್ಮೋನಿಯಂ ವಾದಕರು. ಗದಗಿನ ಗಾನಗಂಧರ್ವ ಕಲಾ ಟ್ರಸ್ಟ್ ಇವರಿಗೆ 'ಗಾನಶ್ರೀ' ಬಿರುದನ್ನು ನೀಡಿ ಸನ್ಮಾನಿಸಿದೆ. ಮೈಸೂರಿನ ಸ್ವರಸಂಕುಲ ಸಂಗೀತಶಾಲೆಯನ್ನು ಪ್ರಾರಂಭಿಸಿ ಹೊಸ ಕಲಾವಿದರುಗಳನ್ನು ರೂಪಿಸುತ್ತಿದ್ದಾರೆ; ಹಿಂದೂಸ್ತಾನಿ ಸಂಗೀತದ ಪ್ರಸಾರಕ್ಕಾಗಿ ಅಹರ್ನಿಶಿ ಶ್ರಮಿಸುತ್ತಿದ್ದಾರೆ.

**ಪಂ. ಕೇಶವ ಜೋಶಿಯವರು** ಎಂಟನೆಯ ವಯಸ್ಸಿನಿಂದ ಸ್ವತಃ ತಾವೇ ತಬಲ ಕಲಿಯತೊಡಗಿದರು. ಬಳಿಕ ಪಂ. ಆರ್.ಎಚ್. ಮೋರೆ, ಪಂ. ಕರವೀರ್, ಪಂ. ಈಶ್ವರಲಾಲ್ ಮಿಶ್ರಾ ಮತ್ತು ಧಾರವಾಡದ ಪಂ. ಸೂರಜ್ ಪುರಂದರೆಯವರ ಬಳಿ ಬನಾರಸ್ ಘರಾನಾದಲ್ಲಿ ಉನ್ನತ ಶಿಕ್ಷಣ ಪಡೆದರು. ಅಖಿಲ ಭಾರತೀಯ ಗಂಧರ್ವ ಮಹಾವಿದ್ಯಾಲಯದ "ತಬಲ ಅಲಂಕಾರ್" ಪರೀಕ್ಷೆಯಲ್ಲಿ ತೇರ್ಗಡೆ. ಕರ್ನಾಟಕ ವಿಶ್ವವಿದ್ಯಾಲಯದ ಬಿ.ಕಾಂ. ಪದವೀಧರರು. ಆಕಾಶವಾಣಿಯ ಬಿ–ಹೈ ಶ್ರೇಣಿ ಕಲಾವಿದರು. ಸ್ಪಷ್ಟತೆ, ಖಚಿತತೆ ಮತ್ತು ಶಾಸ್ತ್ರನಿಷ್ಠೆ ಇವರ ವೈಶಿಷ್ಟ್ಯ. ಹಲವಾರು ಉನ್ನತ ಪುರಸ್ಕಾರಗಳಿಗೆ ಭಾಜನರು. ವಿದೇಶಗಳಲ್ಲಿಯೂ ಸಂಗೀತವನ್ನು ಪರಿಚಯಿಸಿದ್ದಾರೆ. ಬೆಂಗಳೂರಿನಲ್ಲಿರುವ "ಆವರ್ತನ್ ಸಂಗೀತ ಸಭಾ" ಮೂಲಕ ಯುವಜನರಿಗೆ ಸಂಗೀತ ಶಿಕ್ಷಣ ನೀಡುತ್ತಿದ್ದಾರೆ.



# ಬೆಳದಿಂಗಳ ಸಂಗೀತ 254

## 5 ಮೇ 2023

**ಗಾಯನ**

**ವಿದ್ವಾನ್ ಸಾಕೇತ್ ರಾಮನ್**

**ವಯೊಲಿನ್**

**ವಿದ್ವಾನ್ ಎಚ್.ಕೆ. ವೆಂಕಟರಾಮ್**





**ಮೃದಂಗ**

**ವಿದ್ವಾನ್ ವಿಜಯ ನಟೇಶನ್**

**ಘಟಂ**

**ವಿದ್ವಾನ್ ಶಮಿತ್ ಎಸ್. ಗೌಡ**



---

ಫೋನ್: 0821–2548221, 2548223 * ಇಮೇಲ್: sutturmath@jssonline.org